# <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>

## <u>SC.93/2021</u>

**P.W.-08**
**C.W.-14**

| | | |
|---|---|---|
| ಹೆಸರು | : | ಜಯಸೂರ್ಯ ಜಿ |
| ತಂದೆಯ ಹೆಸರು | : | ಲೇ. ಗುಣಶೇಖರ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಅಂಬ್ಯೂಲೆನ್ಸ ಚಾಲಕ |
| ವಾಸಸ್ಥಳ | : | ಬಿ ಎಮ್ ಸಿ ನಗರ, ಮೈಸೂರು |

**<u>ದಿನಾಂಕಃ 26.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–</u>**

ನಾನು ಕಳೆದ 5 ವರೆ ವರ್ಷಗಳಿಂದ ಸಿದ್ದಾರ್ಥ ವಸ್ಟಿಷ್ಟ ನಲ್ಲಿ ಅಂಬ್ಯೂಲೆನ್ಸ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ.

2. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಗೊತ್ತು. ಆತ ನಮ್ಮ ಅಂಬ್ಯೂಲೆನ್ಸ ಅನ್ನು ಚಲಾಯಿಸಲು, ನಿಗಧಿತ ಚಾಲಕ ಇಲ್ಲದಿದ್ದಾಗ ಬರುತ್ತಿದ್ದ. ಆತ ಕೋವಿಡ್ ಸಮಯದಲ್ಲಿ ಬರುತ್ತಿದ್ದ. ನನ್ನ ಬಳಿ ವಿವೊ ಕಂಪನಿಯ ಮೊಬೈಲ್ ಫೊನ್ ಇತ್ತು. ಅದರಲ್ಲಿ ಏರಟೆಲ್ ಸಿಮ್ ಕಾರ್ಡ ಅಳವಡಿಸಲಾಗಿತ್ತು. ಅದರ ನಂ. 9972994028 ಆಗಿತ್ತು. ಸಿಮ್ ಕಾರ್ಡ ನನ್ನ ಕ್ಲಾಸಮೇಟ್ ಮಂಜು ನ ಹೆಸರಿನಲ್ಲಿತ್ತು. ನನ್ನಲ್ಲಿ ಪಾನ್ ಕಾರ್ಡ ಇರಲಿಲ್ಲ ಆದ್ದರಿಂದ ಆತನ ಹೆಸರಿನಲ್ಲಿ ಸಿಮ್ ಕಾರ್ಡ ನ್ನು ಪಡೆದಿದ್ದೆ.

3. 1 ನೇ ಆರೋಪಿಯ ಬಳಿಯಲ್ಲಿ ಮೊಬೈಲ್ ಇತ್ತು. ಅದರ ನಂ. ನನಗೆ ನೆನಪಿಲ್ಲ. ನನ್ನ ಮೊಬೈಲ್ ನಲ್ಲಿ ಆತನ ನಂಬರನ್ನು ವಿನಯ್ ಅಣ್ಣ ಎಂದು ಸೇವ್ ಮಾಡಿಕೊಂಡಿದ್ದೆ.

4. ದಿಃ14.12.2020 ರಂದು ರಾತ್ರಿ 10.30 ರ ಸಮಯಕ್ಕೆ ನಾನು ಕೆ ಆರ್ ಆಸ್ಪತ್ರೆಯ ಬಳಿಯಲ್ಲಿ ಇದ್ದೆ. ಆಗ 1 ನೇ ಆರೋಪಿ ವಿನಯ್ ನನಗೆ ಫೊನ್ ಮಾಡಿ, ಬಾಡಿಗೆ ಇದೇ , ಕುರಿಮಂಡಿಗೆ ಬಾ ಎಂದು ಹೇಳಿದ. ಆಗ ನಾನು ಕುರಿಮಂಡಿಯ ಗೇಟ್ ಬಳಿಗೆ ಅಂಬ್ಯೂಲೆನ್ಸ ತೆಗೆದುಕೊಂಡು ಹೋದೆ. ಅಲ್ಲಿ 1 ನೇ ಆರೋಪಿ ಮತ್ತು ಆತನ ಮೂವರು ಸ್ನೇಹಿತರು ಇದ್ದರು. ನಾನು

ಅವರಲ್ಲಿ ಯಾರು ಪೇಷೆಂಟ್ ಎಂದು ಕೇಳಿದೆ. ಆಗ 1 ನೇ ಆರೋಪಿ ವಿನಯ್, ಒಬ್ಬನನ್ನು ತೋರಿಸಿ, ಇತನೇ ಪೇಷೆಂಟ್ ಎಂದು ಹೇಳಿದ. ಆಗ ನಾನು, ಆತನಿಗೆ ಏನಾಗಿದೆ, ಚೆನ್ನಾಗಿಯೇ ಇದ್ದಾನಲ್ಲ ಎಂದೆ. ಆತನಿಗೆ ಏನಾಗಿದೆ ಎಂದು ನಾನು ಕೇಳಿದೆ, ಆಗ , ಆತನಿಗೆ ನಾಯಿ ಕಚ್ಚಿದೆ ಎಂದು ಹೇಳಿದರು. ಆಗ ನಾನು, ಈಗ ಎಲ್ಲಿ ಟ್ರೀಟಮೆಂಟ್ ಕೊಡುತ್ತಾರೆ, ಬೆಳಿಗ್ಗೆ ತಾನೆ ಕೊಡುವುದು ಎಂದು ಹೇಳಿದೆ. ಆಗ ಅಲ್ಲಿ 1 ನೇ ಆರೋಪಿ ಮತ್ತು ಪೇಷೆಂಟ್ ಎಂದು ಹೇಳಿ ತೋರಿಸಿದ ವ್ಯಕ್ತಿಯ ನಡುವೆ ಜಗಳವಾಯಿತು. ಆಗ ನಾನು ಜಗಳ ಬಿಡಿಸಿದೆ. ಅವರು ಜಗಳ ನಿಲ್ಲಿಸಲಿಲ್ಲ. ಆಗ ಅವರು ನನಗೆ ಹೊಡೆದರು. ಹೀಗಾಗಿ ನಾನು ಅಂಬ್ಯೂಲೆನ್ಸ ತೆಗೆದುಕೊಂಡು ವಾಪಸ್ ಕೆ ಆರ್ ಆಸ್ಪತ್ರೆಗೆ ಬಂದೆ. ಆ ಜಾಗದಲ್ಲಿ ಬೀದಿ ದೀಪ ಇತ್ತು. ಆ ಬೆಳಕಿನಲ್ಲಿ ನಾನು 1 ನೇ ಆರೋಪಿ ಮತ್ತು ಇತರರನ್ನು ನೋಡಿದ್ದೆ.

5. ಬೆಳಗಿನ ಜಾವ 3 ಗಂಟೆಗೆ ನಾನು ಕೆ ಆರ್ ಆಸ್ಪತ್ರೆಯಲ್ಲಿ ಇದ್ದಾಗ 1 ನೇ ಆರೋಪಿ ಮತ್ತು ಆತನ ಇಬ್ಬರು ಸ್ನೇಹಿತರು ಬಂದರು. 1 ನೇ ಆರೋಪಿ ನನ್ನಲ್ಲಿಗೆ ಬಂದು, ಆತನ ಕಥೆ ಮುಗಿಯಿತು ಎಂದು ಹೇಳಿದ. ಆಗ ನಾನು ಆತನಿಗೆ ಆಸ್ಪತ್ರೆಯ ಬಳಿಗೆ ಏಕೆ ಬರುತ್ತೀರಿ, ಇಲ್ಲಿಗೆ ಬರಬೇಡಿ ಎಂದು, ಜೀವದ ಬೆಲೆ ಗೊತ್ತಿಲ್ಲವೇ ಕೇಳಿದೆ.

6.ಬೆಳಿಗ್ಗೆ 10.30 ಕ್ಕೆ ಪೊಲೀಸರು ನನಗೆ ಫೋನ್ ಮಾಡಿ ಎನ್ ಆರ್ ಪೊಲೀಸ್ ಠಾಣೆಗೆ ಬರಲು ಹೇಳಿದ್ದರು. 11.00 ಗಂಟೆಗೆ 1 ನೇ ಆರೋಪಿ ನನಗೆ ಫೋನ್ ಮಾಡಿದ್ದ. ಪೊಲೀಸರು ಏನಾದರೂ ಕೇಳಿದರೆ ಹೇಳಬೇಡ, ನಾನು ಮೊಬೈಲ್ ಅನ್ನು ಸ್ವಿಚ್ ಆಫ್ ಮಾಡುತ್ತಿದ್ದೇನೆ ಎಂದು ಹೇಳಿ ಕಟ್ ಮಾಡಿದ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ನನ್ನ ಮೊಬೈಲ್ ಅನ್ನು ಪೋಲಿಸರಿಗೆ ಕೊಟ್ಟೆ 1 ನೇ ಆರೋಪಿ ಏನೇನು ಮಾಡಿದ್ದರು ಅವುಗಳನ್ನು ಪೊಟೊ ತೆಗೆದು ನನ್ನ ಮೊಬೈಲ್ ನ ವಾಟ್ಸಆಪ್ ಗೆ ಕಳುಹಿಸಿದ್ದ. ಘಟನೆ ನಡೆದು 1 ವಾರದ ನಂತರ ನಾನು ಪೊಲೀಸರಿಗೆ ನನ್ನ ಮೊಬೈಲ್ ನ್ನು ಕೊಟ್ಟಿದ್ದೆ. ನನ್ನ ಮೊಬೈಲ್ ನ್ನು ಚೆಕ್ ಮಾಡಿ, 1 ದಾಖಲಾತಿಗೆ ನನ್ನ ಸಹಿಯನ್ನು ಪಡೆದರು. ಈಗ ನೋಡುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 24.12.2020 ರಂದು ಪೊಲೀಸ್ ಠಾಣೆಯಲ್ಲಿ ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿ.ಪಿ 22 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿ.ಪಿ 22 (ಎ) ಎಂತಲೂ ಗುರುತಿಸಲಾಯಿತು. ಸದರಿ ನನ್ನ ಮೊಬೈಲ್ ನ್ನು ಈಗ

ನೋಡಿದರೆ ಗುರುತಿಸುತ್ತೇನೆ. ( ನ್ಯಾಯಾಲಯದಲ್ಲಿ ಸೀಲ್ ಮಾಡಿದ್ದ ಬಿಳಿ ಬಣ್ಣದ ಚೀಲವನ್ನು ತೆರೆದು ಅದರಲ್ಲಿದ್ದ ಮೊಬೈಲ್ ನ್ನು ಹೊರತೆಗೆಯಲಾಯಿತು. ) ಸಾಕ್ಷಿಯು ಸದರಿ ಮೊಬೈಲ್ ನ್ನು ನೋಡಿ, ಗುರುತಿಸಿ, ಅದು ತನ್ನ ಮೊಬೈಲ್ ಎಂದಿರುತ್ತಾನೆ. ಸದರಿ ಮೊಬೈಲ್ ಅನ್ನು ಎಂ.ಒ. 11 ಎಂದು ಗುರುತು ಪಡಿಸಿಕೊಳ್ಳಲಾಯಿತು.

7. ನನ್ನ ಮೊಬೈಲ್ ಗೆ 1 ನೇ ಆರೋಪಿ ಕಳುಹಿಸಿದ್ದ ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ 1 ನೇ ಆರೋಪಿ ಫೋಟೋಗಳನ್ನು ನನ್ನ ವಾಟ್ಸಆಪ್ ಗೆ ಕಳುಹಿಸಿದಾಗ ನಾನು ಆ ಫೋಟೋಗಳನ್ನು ನೋಡಿರಲಿಲ್ಲ. ನಿಪಿ 14 ,15 ಮತ್ತು 16 ರನ್ನು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿ ಬಿಳಿ ಬಣ್ಣದ ಶರ್ಟ ಅನ್ನು ಧರಿಸುವವನು 1 ನೇ ಆರೋಪಿ ಆಗಿರುತ್ತಾನೆ ಎಂದು ಗುರುತಿಸುತ್ತಾನೆ.

8. ಆ ದಿನ ರಾತ್ರಿ 1 ನೇ ಆರೋಪಿಯೊಂದಿಗೆ ಉಳಿದ ಮೂರು ಜನರನ್ನು ನೋಡಿದರೆ ಗುರುತಿಸುತ್ತೇನೆ. 2 ಮತ್ತು 3 ನೇ ಆರೋಪಿತರನ್ನು ಗುರುತಿಸುವ ಬಾಬ್ತು ಯಾವುದೇ ತಕರಾರು ಇರುವುದಿಲ್ಲ ಎಂದು 2 ಮತ್ತು 3 ನೇ ಆರೋಪಿತರ ವಕೀಲರು ತಿಳಿಸಿರುತ್ತಾರೆ.

9. ನಿಪಿ 8 ಮತ್ತು 9 ರಲ್ಲಿ ಇರುವ ವ್ಯಕ್ತಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ.

10. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ –**

11. ದಿಃ 14.12.2020 ರಂದು ರಾತ್ರಿ 10.30 ರ ಸಮಯಕ್ಕೆ ನಾನು ಕುರಿಮಂಡಿಯ ಗೇಟ್ ಬಳಿಗೆ ಹೋದಾಗ ಅಲ್ಲಿ ಇದ್ದಂತಹ ವ್ಯಕ್ತಿಗೆ ನಾಯಿ ಕಚ್ಚಿದ ಬಾಬ್ತು ಚಿಕಿತ್ಸೆ ಕೊಡಿಸುವ ಬಗ್ಗೆ ಗಲಾಟೆ ನಡೆಯಿತು

ಎನ್ನುವುದು ಸರಿ. ಬೆಳಗಿನ ಜಾವ್ 3.00 ಗಂಟೆಗೆ ಆರೋಪಿತರು ಬಂದು 1 ನೇ ಆರೋಪಿ , ರವಿ ಅಲಿಯಾಸ್ ಬಚ್ಚಾನನ್ನು ಮುಗಿಸಿದೆವು ಎಂದು ನನಗೆ ತಿಳಿಸಿ, ನನ್ನ ಮೊಬೈಲ್ ಗೆ ಫೊಟೊ ಮತ್ತು ಮೆಸೆಜ್ ಅನ್ನು ವಾಟ್ಸ ಆಪ್ ನಲ್ಲಿ ಹಾಕಿರುವುದಾಗಿ ತಿಳಿಸಿದ ಎಂದರೆ ಸರಿಯಲ್ಲ. ನಂತರ ನಾನು ನನ್ನ ಮೊಬೈಲ್ ನೆಟ್ ಅನ್ನು ಆನ್ ಮಾಡಿ, 1 ನೇ ಆರೋಪಿ ಕಳುಹಿಸಿದ್ದನ್ನು ಚೆಕ್ ಮಾಡಿದಾಗ ಅದರಲ್ಲಿ 1 ನೇ ಆರೋಪಿ ರವಿ ಅಲಿಯಾಸ್ ಬಚ್ಚಾನನ್ನು ಕೊಲೆ ಮಾಡಿದ ಚಿತ್ರ ಇತ್ತು ಮತ್ತು ಅದನ್ನು ನೋಡಿ ನಾನು ಗಾಭರಿಯಾದೆ, ಎನ್ನುವುದು ಸರಿಯಲ್ಲ. ಈ ಘಟನೆ ನಡೆದ 10 ದಿನಗಳ ನಂತರ ನಾನು ನನ್ನ ಮೊಬೈಲ್ ನ್ನು ದಿಃ 24.12.2020 ರಂದು ಪೊಲೀಸರಿಗೆ ಕೊಟ್ಟೆ ಎನ್ನುವುದು ಸರಿ. ಆಗ ಪೊಲೀಸರು ನನ್ನ ಮುಂದೆ ನನ್ನ ಮೊಬೈಲ್ ನಲ್ಲಿ ವಾಟ್ಸ ಆಪ್ ಅನ್ನು ಚೆಕ್ ಮಾಡಿದರು ಎನ್ನುವುದು ಸರಿ. ಅದರಲ್ಲಿ 1 ನೇ ಆರೋಪಿ ಆ ವ್ಯಕ್ತಿಯನ್ನು ಕೊಲೆ ಮಾಡುತ್ತಿದ್ದ ಚಿತ್ರಗಳು ಇದ್ದವು ಎನ್ನುವುದು ಸರಿ. ಅಲ್ಲದೆ 1 ನೇ ಆರೋಪಿ, ಇಂಗ್ಲೀಷ್ ನಲ್ಲಿ ' ಮುಗಿತು ಕಥೆ ' 'ಅವನದು ' ಮತ್ತು 'ಡೊಂಟ್ ವರ್ರಿ ಜಯಸೂರ್ಯ' ಎಂದು ಇದ್ದವು ಎನ್ನುವುದು ಸರಿ. ಇವುಗಳನ್ನು ನೋಡಿ, ಚೆಕ್ ಮಾಡಿ ನನ್ನ ಮೊಬೈಲ್ ನ್ನು ಅಮಾನತ್ತು ಪಡಿಸಿಕೊಂಡರು ಎನ್ನುವುದು ಸರಿ. ಆ ಮೊಬೈಲ್ ನ್ನು ನಾನು ಪೊಲೀಸರಿಗೆ ದಿಃ 24.12.2020 ರಂದು ಕೊಡುವವರೆಗೂ, ಮೊಬೈಲ್ ನನ್ನ ಬಳಿಯೇ ಇತ್ತು ಎನ್ನುವುದು ಸರಿ.

12. ಪೊಲೀಸರು ನನ್ನ ಮೊಬೈಲ್ ನ್ನು ಚೆಕ್ ಮಾಡಿ ನೋಡಿದಾಗ , ಈಗ ತೋರಿಸಿದ ಪೋಟೋಗಳಾದ ನಿಪಿ 14,15 ಮತ್ತು 16 ಇದ್ದವು ಎನ್ನುವುದು ಸರಿ.

13. 1 ನೇ ಆರೋಪಿ ನನ್ನ ಬಳಿಗೆ ಬಂದು ರವಿ ಅಲಿಯಾಸ್ ಬಚ್ಚಾ ನ ಕಥೆಯನ್ನು ಎಂದು ಹೇಳಿದ ಎನ್ನುವುದು ಸರಿ. ಈ ಸಂದರ್ಭದಲ್ಲಿ 1 ನೇ ಆರೋಪಿ ಪರ ವಕೀಲರು ಈ ರೀತಿಯಲ್ಲಿ ಸಾಕ್ಷಿ ನುಡಿದಿರುವುದಿಲ್ಲ ಎಂದು ವಾದ ಮಾಡಿದ್ದು, ನ್ಯಾಯಾಲಯ ಸಾಕ್ಷಿ ಹೇಳಿದ್ದನ್ನು ಯತ್ತಾವತ್ತಾಗಿ ದಾಖಲಿಸಿರುತ್ತದೆ. ಮಾನ್ಯ ಅಭಿಯೋಜಕರು ಪುನಃ ಪ್ರಶ್ನಿಸಿದಾಗ ಸಾಕ್ಷಿ, 'ಅವನ ಕಥೆ ಮುಗಿಯಿತು ' ಎಂದು ನಾನು ಹೇಳಿದೆ ಎಂದು ನುಡಿಯುತ್ತಾನೆ.

14. ಸಂಬಂಧಪಟ್ಟ ಭಾಗವನ್ನು ನಿಪಿ 23 ಎಂದು ಗುರುತು ಪಡಿಸಿಕೊಳ್ಳಲಾಯಿತು.

15. ಪೊಲೀಸರ ಮುಂದೆ ನಾನು ಮೇಲ್ಕಂಡ ರೀತಿಯಲ್ಲಿ ಹೇಳಿದ್ದರೂ ಸಹ, 1 ನೇ ಆರೋಪಿ ನನ್ನ ಸ್ನೇಹಿತನಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಿಂದಃ–**

16. ರವಿ ಅಲಿಯಾಸ್ ಬಚ್ಚಾ ನನಗೆ ಗೊತ್ತಿಲ್ಲ. ನಾನು ಬೆಳಿಗ್ಗೆ ಆಸ್ಪತ್ರೆಗೆ ಹೋದರೆ ಸಂಜೆಯವರೆಗೂ ಆಸ್ಪತ್ರೆಯಲ್ಲಿಯೇ ಇರುತ್ತೇನೆ. ಆ ದಿನ ಬೆಳಿಗ್ಗೆ ನಾನು 6.30– 7.00 ಗಂಟೆ ಸಮಯಕ್ಕೆ ಆಸ್ಪತ್ರೆಗೆ ಹೋಗಿದ್ದೆ. ಸಂಜೆಯವರೆಗೂ ಆಸ್ಪತ್ರೆಯಲ್ಲಿಯೇ ಇದ್ದೆ. ನನ್ನ ಮನೆ ಇರುವುದು ಬಿ ಎಮ್ ಸಿ ನಗರದಲ್ಲಿ. 1 ನೇ ಆರೋಪಿಯ ಪರಿಚಯ ನನಗೆ ನಮ್ಮ ವಾಹನದ ಮಾಲೀಕರಾದ ಪ್ರದೀಪ ರವರ ಮೂಲಕ ಆಗಿತ್ತು.

17. ನನ್ನ ಬಳಿ ಸಿಮ್ ಇಲ್ಲದೆ ಇದ್ದುದರಿಂದ, ನನ್ನ ಕ್ಲಾಸಮೇಟ್ ಮಂಜ ನ ಹೆಸರಿನಲ್ಲಿ ಸಿಮ್ ಖರೀದಿಸಿದ್ದೆ. ಆತನನ್ನು ಕರೆದುಕೊಂಡು ಹೋಗಿ ನಾನು ಸಿಮ್ ಖರೀದಿಸಿದ್ದೆ . ಅ ದನ್ನು ಖರೀದಿಸುವಾಗ ಮಂಜ ಆತನ ಆಧಾರ ಕಾರ್ಡ, 2 ಪೋಟೋಗಳು ಮತ್ತು ಪಾನ್ ಕಾರ್ಡ ನ್ನು ಕೊಟ್ಟಿದ್ದ.

18.ದಿಃ 14.12.2020 ರಂದು ನಾನು ಬೆಳಗಿನ ಜಾವದ ವರೆಗೂ ನಾನು ಆಸ್ಪತ್ರೆಯಲ್ಲಿಯೇ ಇದ್ದೆ. ಸಂಜೆ 6.00 ಗಂಟೆಗೆ ಪಿರಿಯಾಪಟ್ಟಣಕ್ಕೆ ಹೋಗಿ ಬಂದಿದ್ದೆ. ಆಸ್ಪತ್ರೆಯಿಂದ ಫೋನ್ ಮಾಡಿದಲ್ಲಿ ಅಥವಾ ರೋಗಿಗಳ ಕಡೆಯವರು ಫೋನ್ ಮಾಡಿದಲ್ಲಿ, ನಾನು ಅಂಬ್ಯೂಲೆನ್ಸ ತೆಗೆದುಕೊಂಡು ಹೋಗುತ್ತೇನೆ. ಪಿರಿಯಾಪಟ್ಟಣದಿಂದ ನಾನು ಕೆ ಆರ್ ಆಸ್ಪತ್ರೆಗೆ ರಾತ್ರಿ 8.30 ರಿಂದ 9.00 ಗಂಟೆ ಸಮಯಕ್ಕೆ ವಾಪಸ್ ಬಂದೆ. 1 ನೇ ಆರೋಪಿ ನನಗೆ ಒಮ್ಮೊಮ್ಮೆ ಬಾಡಿಗೆಗೆ ಇದ್ದಾಗ ಫೋನ್ ಮಾಡುತ್ತಿದ್ದ. ಫೋನ್ ಮಾಡಿದಾಗ ನಾನು ರೋಗಿಯ ಬಗ್ಗೆ ಕೇಳುತ್ತೇನೆ. 1 ನೇ ಆರೋಪಿ ಫೋನ್ ಮಾಡಿ ಹೇಳಿದಾಗ ನಾನು ರೋಗಿಯ ಬಗ್ಗೆ ವಿಚಾರಿಸಿದೆ. ಆಗ, ಆತ

ಬಹಳ ಸಿರಿಯಸ್ ಇದೆ ಬಾ ಎಂದ. ಮನೆಗೆ ಹೋಗುವಾಗ ನಾನು ಅಂಬ್ಯೂಲೆನ್ಸ ನ್ನು ಆಸ್ಪತ್ರೆಯ ಬಳಿಯಲ್ಲಿಯೇ ಬಿಟ್ಟು ಹೋಗುತ್ತೇನೆ. 1 ನೇ ಆರೋಪಿಯ ಸ್ನೇಹಿತರ ಬಗ್ಗೆ ನನಗೆ ಗೊತ್ತಿಲ್ಲ. ನಾನು 1 ನೇ ಆರೋಪಿ ಪೋನ್ ಮಾಡಿದಾಗ, ನಾನು ಅಂಬ್ಯೂಲೆನ್ಸ ತೆಗೆದುಕೊಂಡು ಹೋರಟೆ. ಅದಕ್ಕೂ ಮುನ್ನ ಯಾವುದೇ ರಿಜಿಸ್ಟರ್ ಅನ್ನು ಎಂಟ್ರಿ ಮಾಡಿರುವುದಿಲ್ಲ. ಏಕೆಂದರೆ ಆ ಪದ್ದತಿ ಇರುವುದಿಲ್ಲ. ಬಾಡಿಗೆಯನ್ನು ನಾನೇ ಪಿಕ್ಸ ಮಾಡುತ್ತೇನೆ. ರಶೀದಿ ಕೊಡುವುದಿಲ್ಲ.

19. ನಾನು ಕುರಿಮಂಡಿಗೆ ಹೋದಾಗ ರಾತ್ರಿ 10.45 ಆಗಿರಬಹುದು. ಎಲ್ಲರೂ ಮಲಗಿದ್ದರು. ಯಾರೂ ಓಡಾಡುತ್ತಿರಲಿಲ್ಲ. ಅಲ್ಲಿ 1 ನೇ ಆರೋಪಿ ಮತ್ತು ಆತನ 4 ಜನ ಸ್ನೇಹಿತರು ಇದ್ದರು. 1 ನೇ ಆರೋಪಿ ಒಬ್ಬ ಹುಡುಗನನ್ನು ತೋರಿಸಿ ಇತನಿಗೆ ನಾಯಿ ಕಚ್ಚಿದೆ ಎಂದು ಹೇಳಿದ. ಆ ಹುಡುಗನ ಹೆಸರು ನನಗೆ ಗೊತ್ತಿಲ್ಲ.

20. ನಾನು ಕೆಆರ್ ಆಸ್ಪತ್ರೆಯ ಹೊರಗಡೆ ಅಂಬ್ಯೂಲೆನ್ಸ ನಲ್ಲಿ ಮಲಗಿದ್ದೆ. ನನ್ನ ಅಂಬ್ಯೂಲೆನ್ಸ ನಂಬರ್ ನ್ನು ನಾನೀಗ ಮರೆತಿದ್ದೇನೆ. ನನಗೆ ಡಿ ಎಲ್ ಇದೆ. ಬೆಳಗಿನ ಜಾವ್ 3.00 ಗಂಟೆಗೆ ನಾನು ಮಲಗಿದ್ದಾಗ, 1 ನೇ ಆರೋಪಿ ಬಂದು ನನ್ನನ್ನು ಎಬ್ಬಿಸಿದ. ಆತನೊಂದಿಗೆ ಇಬ್ಬರು ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ನನ್ನನ್ನು ಎಬ್ಬಿಸಿ, ಅವರು ಎಲ್ಲಿ ಹೋದರು ನನಗೆ ಗೊತ್ತಿಲ್ಲ.

21. ಬೆಳಿಗ್ಗೆ ಅಂದರೆ 15 ನೇ ತಾರೀಖು ಎನ್ ಆರ್ ಪೊಲೀಸ್ ಠಾಣೆಯ ಪೋಲೀಸರು ಪೋನ್ ಮಾಡಿದ್ದರು. ಕೊಲೆಯಾಗಿದೆ, ಆ ವಿಚಾರವಾಗಿ ಬಾ ಎಂದಿದ್ದರು. ನಾನು ಆ ದಿನ ಬೆಳಿಗ್ಗೆ 10.30 ಕ್ಕೆ ಎನ್ ಆರ್ ಪೊಲೀಸ್ ಠಾಣೆಗೆ ಹೋಗಿದ್ದೆ. ನನ್ನ ಮೊಬೈಲ್ ಪೊನ್ ನ್ನು ತೆಗೆದುಕೊಂಡು ಹೋಗಿದ್ದೆ. ಆಗ ಪೊಲೀಸರು ನನ್ನ ಪೋನ್ ನನ್ನು ಕೇಳಿರುವುದಿಲ್ಲ. ಹಿಂದಿನ ದಿನ ರಾತ್ರಿಯ ಗಲಾಟೆಯ ಬಗ್ಗೆ ವಿಚಾರಿಸಿದರು. ಆಗ ನಾನು ಹೇಳಿದೆ. ಆ ದಿನ ನಾನು ನನ್ನ ಮೊಬೈಲ್ ನಲ್ಲಿ 1 ನೇ ಆರೋಪಿ ಕಳುಹಿಸಿದ್ದ ಪೋಟೋಗಳನ್ನು ಡೌನಲೋಡ್ ಮಾಡಿದ್ದೆ. ಕರೆನ್ಸಿಯನ್ನು ಹಾಕಿಸಿದ್ದರೆ ಮಾತ್ರ ಪೋಟೋಗಳು ಬರುತ್ತವೆ ಎನ್ನುವುದು ಸರಿ. 10 ದಿನ ಬಿಟ್ಟು ಪೊಲೀಸ್

ಠಾಣೆಗೆ ಹೋಗುವಾಗ ನನ್ನ ತಾಯಿಯವರಿಂದ ಹಣ ಪಡೆದು ಕರೆನ್ಸಿ ಹಾಕಿಸಿದ್ದೆ. 15 ನೇ ತಾರೀಖಿನಂದು ನಾನು ಪೊಲೀಸ್ ಠಾಣೆಗೆ ಹೋದಾಗ ಮೊಬೈಲ್ ನ್ನು ಪೊಲೀಸರಿಗೆ ಕೊಟ್ಟಿದ್ದೆ. ಆ ದಿನ ನಾನು 1 ನೇ ಆರೋಪಿ ನನ್ನ ಮೊಬೈಲ್ ಗೆ ಪೋಟೊಗಳನ್ನು ಕಳುಹಿಸಿದ್ದ ವಿಷಯವನ್ನು ತಿಳಿಸಿರುವುದಿಲ್ಲ. ನನ್ನ ಮೊಬೈಲ್ ನಲ್ಲಿ voice record ಗಳು ಇದ್ದವು ಹೀಗಾಗಿ ಪೋಲೀಸರಿಗೆ ನನ್ನ ಮೊಬೈಲ್ ಪೋನ್ ನ್ನು ಕೊಟ್ಟೆ. ಅದರಲ್ಲಿ ಚಾರ್ಜ್ ಇತ್ತು. ನನ್ನ ಮುಂದೆ ಮೊಬೈಲ್ ಅನ್ನು ಆನ್ ಮಾಡಿರುವುದಿಲ್ಲ. 24 ನೇ ತಾರೀಖಿನಂದು ನೀನು ಪೊಲೀಸ್ ಠಾಣೆಗೆ ನೀನು ಏಕೆ ಹೋಗಿದ್ದೆ ಎನ್ನುವ ಪ್ರಶ್ನೆಗೆ 'ಸಾಕ್ಷಿ ಉತ್ತರಿಸಿರುವುದಿಲ್ಲ'.

**(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮದ್ಯಾಹ್ನ 2.00 ಗಂಟೆ ಆಗಿದ್ದರಿಂದ ಪಾಟೀಸವಾಲನ್ನು ಮದ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

**ದಿನಾಂಕಃ 26.05.2023 ರಂದು ಮದ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಕರೆಸಿ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಿಂದಃ–**

22. 15 ನೇ ತಾರಿಖಿನಂದು ನಾನು ಪೊಲೀಸ್ ಠಾಣೆಗೆ ಹೋದಾಗ voice record ನಲ್ಲಿದ ಸಂಭಾಷಣೆಯನ್ನು ನನಗೆ ಕೇಳಿಸಿರುವುದಿಲ್ಲ. ನನ್ನ ಫೋನ್ ನನ್ನು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಗೆ ಕೊಟ್ಟೆ, ಅವರು ಯಾರು ಮತ್ತು ಅವರು ಹೆಸರು ಏನೆಂದು ನನಗೆ ಗೊತ್ತಿಲ್ಲ. 15 ನೇ ತಾರಿಖಿನಂದು ಒಂದು ಬರವಣಿಗೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಅದರಲ್ಲಿ ಏನನ್ನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ನನ್ನ ಮೊಬೈಲ್ ನ್ನು ಪೊಲೀಸ್ ಠಾಣೆಯಲ್ಲಿ ಆನ್ ಮಾಡಿದ್ದರೋ , ಇಲ್ಲವೋ ಗೊತ್ತಿಲ್ಲ.

23. 24 ನೇ ತಾರೀಖಿನಂದು ನಾನು ನನ್ನ ತಾಯಿಯನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಹೋಗಿದ್ದೆ. ಆ ದಿನ ನನ್ನ ಮೊಬೈಲ್ ನ್ನು ಪೊಲೀಸರು ಆನ್ ಮಾಡಿದ್ದರೋ , ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ 22 ಅಮಾನತ್ತು ಮಹಜರ್ ನಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 14,15 ಮತ್ತು 16 ಪೊಟೋಗಳನ್ನು ನನಗೆ ಪೊಲೀಸರು ತೋರಿಸಿದ್ದರು.

24. ದಿಃ 14.12.2020 ರಂದು ನಾನು ರಾತ್ರಿ 10.30 ಕ್ಕೆ ಕುರಿಮಂಡಿಗೆ ಹೋಗಿರಲಿಲ್ಲ ಎನ್ನುವುದು ಸರಿಯಲ್ಲ. 1 ನೇ ಯ ಆರೋಪಿ ನನಗೆ ಫೋನ್ ಮಾಡಿ ಅಲ್ಲಿಗೆ ಕರೆದಿರಲಿಲ್ಲ ಎನ್ನುವುದು ಸರಿಯಲ್ಲ. ಬೆಳಗಿನ ಜಾವ್ 3.00 ಗಂಟೆಯ ಸಮಯಕ್ಕೆ 1 ನೇ ಆರೋಪಿ ಇತರೆ ಇಬ್ಬರೊಂದಿಗೆ ಕೆ ಆರ್ ಆಸ್ಪತ್ರೆಗೆ ಬಂದಿರಲಿಲ್ಲ, ನನ್ನನ್ನು ಎಬ್ಬಿಸಿರಲಿಲ್ಲ ಎನ್ನುವುದು ಸರಿಯಲ್ಲ.1 ನೇ ಆರೋಪಿ ನನ್ನ ಮೊಬೈಲ್ ಗೆ 3 ಮೆಸೆಜ್ ಗಳನ್ನು ಕಳುಹಿಸಿರಲಿಲ್ಲ ಎನ್ನುವುದು ಸರಿಯಲ್ಲ.

25. ನನಗೂ , ರವಿ ಅಲಿಯಾಸ್ ಬಚ್ಚಾನಿಗೂ ಯಾವುದೇ ರೀತಿಯ ವೈಶಮ್ಯ ಇರಲಿಲ್ಲ. ನನ್ನ ಮೊಬೈಲ್ ನಿಂದ ನಿಪಿ 14,15 ಮತ್ತು 16ನ್ನು ಡೌನಲೊಡ್ ಮಾಡಿಕೊಂಡು ತೆಗೆದುಕೊಂಡಿರುವುದಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮೊಬೈಲ್ ಗೆ 1 ನೇ ಆರೋಪಿ ಯಾವುದೇ ಪೋಟೋಗಳನ್ನು ಕಳುಹಿಸಿರಲಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರೇ ಪೊಟೋಗಳನ್ನು ನನ್ನ ಮೊಬೈಲ್ ಗೆ ಕಳುಹಿಸಿ, ಡೌನಲೋಡ್ ಮಾಡಿ, ಎಡಿಟ್ ಮಾಡಿ , ತೆಗೆದಿರುತ್ತಾರೆ ಎನ್ನುವುದು ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

**26.** ಕುರಿಮಂಡಿಗೆ ಹೋದಾಗ, ಅಲ್ಲಿ ನಾಯಿ ಕಚ್ಚಿದ್ದ ವ್ಯಕ್ತಿಯನ್ನು ನಾನು ಮೊದಲ ಬಾರಿಗೆ ಅಲ್ಲಿ ನೋಡಿದ್ದೆ ಅನ್ನುವುದು ಸರಿ. ಅಂದಿನಿಂದ, ನಾನು ಪೊಲೀಸರಿಗೆ ಮೊಬೈಲ್ ನ್ನು ಕೊಡುವವರೆಗೆ ಆ ವ್ಯಕ್ತಿಯನ್ನು ನೋಡಿರುವುದಿಲ್ಲ ಎನ್ನುವುದು ಸರಿ. ನಾಯಿ ಕಚ್ಚಿದ ವ್ಯಕ್ತಿಗೆ ಚಿಕಿತ್ಸೆ ಕೊಡಿಸಲು ಉಳಿದ ಆರೋಪಿಗಳು ಆಸ್ಪತ್ರೆಗೆ ಹೋಗಿದ್ದರು ಎನ್ನುವುದು ಸರಿಯಲ್ಲ.

27. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ನೀವು, ಆ ಸ್ಥಳಕ್ಕೆ ಹೋದಾಗ ಅಲ್ಲಿ ವಿನಯ ಅಲಿಯಾಸ್ ಪರೋಟ, ಪ್ರಸಾದ, ಅಪ್ಪು ಮತ್ತು ರವಿ ಇದ್ದರು ಎಂದು ಹೇಳಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ಹೆಸರುಗಳನ್ನು ಹೇಳಿರುವುದಿಲ್ಲ ಎನ್ನುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

**(ಉಳಿದಂತೆ 1 ಮತ್ತು 3 ನೇ ಆರೋಪಿತರ ವಕೀಲರು ಮಾಡಿದ ಪಾಟೀಸವಾಲನ್ನೆ ಅಳವಡಿಸಿಕೊಂಡಿರುತ್ತೇನೆ ಎಂದಿರುತ್ತಾರೆ)**

**ಮರು ವಿಚಾರಣೆಃ ಇಲ್ಲಾ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.